# ವಾರ್ತಾ ವಿಶ್ಲೇಷಣೆ

## ಶಯನೋತ್ಸವ

ತಮ್ಮ ಬದುಕಿನ ಹೆಚ್ಚು ಭಾಗ ಒಂದಲ್ಲ ಒಂದು ಹೈಟೆಕ್ ಗ್ಯಾಡ್ಜೆಟ್‌ಗಳನ್ನು ಅವಲಂಬಿಸಿರುವ ಜಪಾನೀಯರ ನಿದ್ದೆಯ ಘಳಿಗೆಗಳೂ ಸಹ ಇನ್ನು ಮುಂದೆ ಹೈಟೆಕ್ ಹಾಸಿಗೆಗಳ ನಿಯಂತ್ರಣದಲ್ಲಿರುವ ಕಾಲ ದೂರವಿಲ್ಲ. ಕರ್ಮಚಟಕ್ಕೆ ಬಲಿಯಾದ (workholics)ಜಪಾನೀಯರಿಗೆ ನಿದ್ರಾದಾನ ಮಾಡುವ ಈ ಹೈಟೆಕ್ ಹಾಸಿಗೆಗಳು ವರವಾಗಿ ಪರಿಣಮಿಸಲಿವೆ. ಅನೇಕ ಗೃಹೋಪಯೋಗಿ ಗ್ಯಾಡ್ಜೆಟ್‌ಗಳನ್ನು ಉತ್ಪಾದಿಸುವ ಟೋಕಿಯೋದಲ್ಲಿರುವ ಪ್ರಸಿದ್ಧ ಎಲೆಕ್ಟ್ರಿಕ್ ಕಂಪನಿಯು ಸಂಪೂರ್ಣ ಗಣಕಯಂತ್ರ ನಿಯಂತ್ರಿತ ಈ ಹಾಸಿಗೆಗಳನ್ನು ತಯಾರಿಸಿದೆ. "ನಿದ್ದೆ ಬರಿಸುವ ವಾತಾವರಣ"ವನ್ನು ಸೃಷ್ಟಿಸುವ ಈ ಹಾಸಿಗೆ ಮಂದವಾದ ದೀಪ, ಹಿತವಾದ ನರಗಳನ್ನು ಶಾಂತಗೊಳಿಸುವಂತಹ ಸಂಗೀತ ಹಾಗೂ ವೀಡಿಯೋ ಚಿತ್ರಣವನ್ನಷ್ಟೇ ಅಲ್ಲದೆ ಕೋಣೆಯ ಹವಾಮಾನ ಹಾಗೂ ಆಮ್ಲಜನಕದ ಮಟ್ಟವನ್ನೂ ನಿರ್ಧರಿಸುತ್ತದೆ. ಈ ಹಾಸಿಗೆಯ ಯೋಜನೆಯನ್ನು ರೂಪಿಸಿದಾತ ಇದರ ಅಗತ್ಯವನ್ನು ಕುರಿತು ಹೇಳುತ್ತಾ ಆಧುನಿಕ ಜಪಾನೀಯರ ಧಾವಂತ ಜೀವನ ಅವರನ್ನು ತೀವ್ರ ಒತ್ತಡಗಳಿಗೆ ಗುರಿಮಾಡಿದೆ, ದೇಶದ ಮೂರನೇ ಒಂದು ಭಾಗದಷ್ಟು ಜನ ನಿದ್ರಾಹೀನತೆಯಿಂದ ಬಳಲುತ್ತಿದ್ದಾರೆ, ಎನ್ನುತ್ತಾರೆ. ಈಗ ಅಂಥವರು ನೂತನವಾಗಿ ತಯಾರದ ಈ ಹಾಸಿಗೆಯ ಒಂದು ಗುಂಡಿಯನ್ನು ಒತ್ತಿದರೆ ಸಾಕು, ನಿದ್ರೆಗಿರುವ ಬಾಧಕಗಳನ್ನೆಲ್ಲ ನಿದ್ದೆಗೆ ಕಳಿಸಿ, ಸುಖವಾದ ನಿದ್ರೆಯನ್ನು ಅನುಭವಿಸಬಹುದು. ಅಷ್ಟೇ ಅಲ್ಲ ಕುಂಭಕರ್ಣನಂತೆ ದೀರ್ಘನಿದ್ದೆಗೆ ಜಾರದಿರಲು ನಿರ್ದಿಷ್ಟ ಸಮಯದ ನಂತರ ನಿದ್ರಿಸುತ್ತಿರುವವರನ್ನು ಎಬ್ಬಿಸುವ ವ್ಯವಸ್ಥೆಯೂ ಸಹ ಈ ಹಾಸಿಗೆಯಲ್ಲಿರುತ್ತದೆ. ನಿದ್ರಾವಿಜ್ಞಾನಿಗಳ ನೆರವಿನಿಂದ ಭಾರೀ ವೆಚ್ಚದ ಈ ಹಾಸಿಗೆ ಮುಂದಿನ ವರ್ಷ ಅಲ್ಲಿ ಸಂತೆಯಲ್ಲಿ ಮಾರಾಟಕ್ಕೆ ಬರಲಿದೆಯಂತೆ. ಆದರೆ ಹಾಸಿಗೆಯ ವೆಚ್ಚ ಕೇಳಿ ಅದನ್ನು ಕೊಳ್ಳುವವನ ನಿದ್ದೆಯೆಲ್ಲ ಹಾರಿಹೋಗಬಹುದು ಎಂಬ ಸಂದೇಹವೂ ಇದೆ. ಇದರ ಬೆಲೆ ಕೇವಲ 25,000 ಡಾಲರುಗಳು ಅಷ್ಟೇ!

ನಿದ್ರಾತೊಂದರೆಗಳ ನಿವಾರಣೆಯ ಕೇಂದ್ರದ ವೈದ್ಯಕೀಯ ನಿರ್ದೇಶಕರು ಈ ಹಾಸಿಗೆಯಲ್ಲಿನ "ನಿದ್ರಾಪ್ರಚೋದಕ ವಾತಾವರಣ" ಸಿದ್ಧಾಂತವನ್ನು ಒಪ್ಪಿದರೂ, "ನಿದ್ದೆ ಬಾರದಿರುವ ಕಾರಣಗಳು ಬಾಹ್ಯ ವಾತಾವರಣದಲ್ಲಿಲ್ಲ, ಬಹಳಷ್ಟು ಕಾರಣಗಳು ನಮ್ಮೊಳಗೇ ಇವೆ" ಎನ್ನುತ್ತಾರೆ. ಇವರ ಅಭಿಪ್ರಾಯವನ್ನು ಸ್ಪಷ್ಟವಾದ ಮಾತುಗಳಲ್ಲಿ ತಿಳಿಸುವ ಸಂಸ್ಕೃತಶ್ಲೋಕ ಇಲ್ಲಿ ಉಲ್ಲೇಖ ಯೋಗ್ಯ:

**ಸುಖಂ ಶೇತೇ ಸತ್ಯವಕ್ತಾ ಸುಖಂ ಶೇತೇ ಮಿತವ್ಯಯೀ ।**
**ಹಿತಭುಕ್ ಮಿತಭುಕ್ ಚೈವ ತಥೈವ ವಿಜಿತೇಂದ್ರಿಯಃ ॥**

"ಸತ್ಯವನ್ನು ನುಡಿಯುವನೂ ಮಿತವ್ಯಯಿಯೂ ಹಿತಮಿತವಾಗಿ ಉಣ್ಣುವನೂ ಇಂದ್ರಿಯಜಯಿಯೂ ಸುಖವಾಗಿ ನಿದ್ರಿಸುತ್ತಾನೆ."

(ವಿ|ಪ್ರ)

## ಅಮೆರಿಕದ ಬುಡಕಟ್ಟು ಜನಾಂಗಗಳು

ಅಮೆರಿಕ ಸರ್ಕಾರವು ಕಾಯ್ದಿರಿಸಿದ ಸೀಮೆಯ ಒಳಗೆ ಬರುವ ಸುಮಾರು ೫೬ ಮಿಲಿಯನ್ ಎಕರೆ ಭೂಮಿಯನ್ನು ಅಲ್ಲಿನ ಆದಿವಾಸಿಗಳು ಎಂದೆನಿಸಿರುವ ಅಮೆರಿಕನ್ ಇಂಡಿಯನ್ಸ್ ಮತ್ತು ಅಲಾಸ್ಕಾ ಹುಟ್ಟೂರಿನವರಿಗೆ (Natives) ಸೇರಿದ್ದೆಂದು ಗುರುತಿಸಲಾಗಿದೆ. ಕಳೆದ ಎರಡು ಶತಮಾನಗಳಲ್ಲಿ ಆದ ಸಾರಿಗೆ ವ್ಯವಸ್ಥೆಯ ಅಭಿವೃದ್ಧಿಯಿಂದಾಗಿ ಇವರ ಭೂಮಿಯನ್ನು ಕಬಳಿಸಲು ಪ್ರಯತ್ನ ನಡೆಯುತ್ತಲೇ ಇತ್ತು. ಅವುಗಳ ಸ್ವಾಮ್ಯತೆಯ ವಿಷಯವಾಗಿ ಸಂಘರ್ಷಗಳಂತೂ ಇದ್ದದ್ದೇ.

ಈ ಬುಡಕಟ್ಟು ಜನಾಂಗದ ಸುಮಾರು ೨.೫ ಮಿಲಿಯ ಜನರು ಈ ಸೀಮೆಯ ಆಚೆ ವಲಸೆ ಹೋಗಿ ತಮ್ಮ ಜನಾಂಗದ ಸ್ಥಳೀಯ ಸಂಸ್ಕೃತಿಯೊಂದಿಗೇ ಗುರುತಿಸಿಕೊಂಡು ತಮ್ಮ ಸ್ವಾಯತ್ತತೆಯನ್ನು ನಿರೂಪಿಸುವ ಪ್ರಯತ್ನ ಅಮೆರಿಕದ ಕೆಲವು ಮುಖ್ಯ ಸ್ಥಿತ್ಯಂತರಗಳನ್ನು ಸೂಚಿಸುತ್ತದೆ. ಶತಮಾನಗಳ ದಮನ, ದಬ್ಬಾಳಿಕೆ, ಹಾಗೂ ತಿರಸ್ಕಾರವನ್ನು ಎದುರಿಸಿದ ಈ ಬುಡಕಟ್ಟಿನ ಜನ ಇತಿಹಾಸದ ಕವಲುದಾರಿಯಲ್ಲಿದ್ದಾರೆ.

ಈ ಬುಡಕಟ್ಟಿನ ಜನ ತಮ್ಮ ಜನಾಂಗೀಯ ಭಾಷೆ ಹಾಗೂ ಸಂಸ್ಕೃತಿಯನ್ನು ಉಳಿಸಿಕೊಂಡು, ದೇಶದ ಕೆಲವು ಪ್ರತಿಷ್ಠಿತ ಹುದ್ದೆಗಳನ್ನು ಅಲಂಕರಿಸಿ ಯಾರಿಗಿಂತಲೂ ತಾವು ಕಡಮೆಯಲ್ಲ ಎಂದು ತೋರಿಸಿದ್ದಾರೆ. ಇದು ವ್ಯಕ್ತಿಯ ಅಂತಸ್ಸತ್ವ ಬೆಳಕಿಗೆ ಬರಲು ಇರುವ ಬಾಧಕಗಳನ್ನೆಲ್ಲ ಧಿಕ್ಕರಿಸಿ ಮಾಡಿದ ಹೋರಾಟ, ಮನುಷ್ಯ ಪ್ರಯತ್ನಗಳ ಮೈಲುಗಲ್ಲಿನಂತಿದೆ. ತಮ್ಮ ಸಾಹಸ, ಪ್ರತಿಭೆ, ಹಾಗೂ ಸಾಂಸ್ಕೃತಿಕ ಕ್ರಿಯಾಶೀಲತೆಯಿಂದ ಇತಿಹಾಸ ಸೃಷ್ಟಿಸಿರುವ ಇವರು ಆ ಜನಾಂಗಗಳ ಹೆಮ್ಮೆ, ಸ್ವಾಭಿಮಾನಗಳ ಪ್ರತೀಕವಾಗಿದ್ದಾರೆ. ಆ ಜನಾಂಗಗಳ ಯಶೋಗಾಥೆಯನ್ನು ಬಿಂಬಿಸುವ ಸಾಹಿತ್ಯ, ಚಲನ ಚಿತ್ರಗಳು, ತಮ್ಮ ಸ್ವ-ಆಡಳಿತದ ಹಾಗೂ ತಲೆಮಾರುಗಳಿಂದ ಆಚರಿಸುತ್ತಿರುವ ಸಂಪ್ರದಾಯವನ್ನು ಅನುಸರಿಸುವ ಹಕ್ಕನ್ನು ದಕ್ಕಿಸಿಕೊಂಡಿರುವುದು—ಇವೆಲ್ಲವೂ ಆ ಜನಾಂಗವು ಅನುಭವಿಸುತ್ತಿರುವ ಸಾಂಸ್ಕೃತಿಕ ಪುನರುಜ್ಜೀವನವನಕ್ಕೆ ಕೈಗನ್ನಡಿ ಹಿಡಿದಂತಿವೆ.

ಕಳೆದ ಸೆಪ್ಟೆಂಬರ್‌ನಲ್ಲಿ ವಾಷಿಂಗ್‌ಟನ್‌ನಲ್ಲಿ ಉದ್ಘಾಟನೆಗೊಂಡ ಅಮೆರಿಕನ್ ಇಂಡಿಯನ್ನರ ರಾಷ್ಟ್ರೀಯ ವಸ್ತುಪ್ರದರ್ಶನ ಈ ಜನಾಂಗಗಳ ಮರುಹುಟ್ಟಿನ ಪ್ರತೀಕದಂತಿದೆ. ಈ ವಸ್ತುಪ್ರದರ್ಶನದ ನಿರ್ದೇಶಕ ಹಾಗೂ ಓಕ್ಲಾಹಾಮದ ಬುಡಕಟ್ಟು ಜನಾಂಗಗಳ ಒಕ್ಕೂಟದ ಸದಸ್ಯ, ಡಬ್ಲ್ಯೂ.ರಿಚರ್ಡ್ (W. Richard) ಹೇಳುವಂತೆ, "ಈ ಸಮುದಾಯಗಳು ತಮ್ಮ ಯೋಗ್ಯತೆ ಹಾಗೂ ಸಾಮರ್ಥ್ಯಗಳ ಬಗ್ಗೆ ಪಡೆದ ಹೊಸ ಅರಿವೇ ಅವುಗಳ ಭರವಸೆಯ ನೆಲೆಯಾಗಿದೆ."